# ಹತ್ತು ರೂಪಾಯಿ ಐಟಂ




ಬೈಕ್‌ನಲ್ಲಿ ನಮ್ಮ ಊರಿಂದ ಸಾಗರಕ್ಕೆ ಹೊರಟಿದ್ದೆ. ಮಾರ್ಗಮಧ್ಯದಲ್ಲಿ ಒಬ್ಬಾತ ಮೋಟಾರ್ ಬೈಕ್‌ಗೆ ಧ್ವನಿವರ್ಧಕ ಕಟ್ಟಿದ್ದರು. ಅದಕ್ಕೆ ಮೊಬೈಲ್ ರೆಕಾರ್ಡರ್ ಕನೆಕ್ಟ್ ಮಾಡಿದ್ದರು. ಅದು ಕೆಂಪುಕಲ್ಲುಸಕ್ಕರೆ, ಖಷಾಯಪುಡಿ, ಜೀರಿಗೆ, ಚಕ್ಕೆ, ಏಲಕ್ಕಿ, ಲವಂಗ, ಗೋಡಂಬಿ, ದ್ರಾಕ್ಷಿ... ಬರೇ ಹತ್ತು ರೂಪಾಯಿ ಎಂದು ಕೂಗುತ್ತಿತ್ತು.

ವಿಚಾರಿಸಿದೆ. ಶಿವಮೊಗ್ಗ ಗಾಡಿಕೊಪ್ಪದ ನಿವಾಸಿ ಅಕ್ಷಯ್ ಜಿಲ್ಲೆಯ ಹತ್ತು ಹಲವು ಸಂತೆಗೆ ತೆರಳಿ ಅಂಗಡಿ ವ್ಯಾಪಾರ ಮಾಡುತ್ತಿದ್ದರಂತೆ. ಲಾಕ್ ಡೌನ್‌ನಿಂದ ಸಂತೆ ರದ್ದಾಗಿವೆ. ಅದಕ್ಕೇ ಈ ರೀತಿಯ ಸಂಚಾರೀ ವ್ಯಾಪಾರ ಶುರು ಮಾಡಿದ್ದಾರಂತೆ. ಹಲವಾರು ಪದಾರ್ಥಗಳು ಇದ್ದು ಎಲ್ಲ ಹತ್ತು ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

# ಉರಗಗಳ ಪ್ರೇಮಿ ಅಪ್ಸರ್

‘ನಾವೆಲ್ಲ ಹಾವು ಎಂದರೆ ಸಾಕು, ಭಯಭೀತರಾಗುತ್ತೇವೆ. ಆದರೆ ಹಾವುಗಳು ಮನುಷ್ಯರಿಗೆ ಹೆದರುತ್ತವೆ. ಅವುಗಳಿಗೆ ತೊಂದರೆ ಮಾಡಿದಾಗ ಮಾತ್ರ ಕಚ್ಚಲು ಮುಂದಾಗುತ್ತವೆ’ ಎಂದು ಅಪ್ಸರ್ ಹುಸೇನ್ ಹೇಳುತ್ತಾರೆ.

ರಾಯಚೂರಿನ ಅವರು ಇದುವರೆಗೆ ಸಾವಿರಾರು ವಿವಿಧ ರೀತಿಯ ಹಾವುಗಳ ಸಂರಕ್ಷಣೆ ಮಾಡಿದ್ದಾರೆ. ಹಾವು ಬಂದಿದೆ ಎಂದು ಕರೆ ಬಂದರೆ ಸಾಕು, ಸ್ಥಳಕ್ಕೆ ಹೋಗಿ ಹಾವು ಹಿಡಿದು ಅದನ್ನು ಅರಣ್ಯ ಪ್ರದೇಶಕ್ಕೆ ಬಿಡುವುದು ಅವರ ಹವ್ಯಾಸ. ಅವರ ಇದಕ್ಕಾಗಿ ಯಾವ ಸಂಭಾವನೆಯನ್ನು ಪಡೆಯುವುದಿಲ್ಲ ಎನ್ನುವುದು ವಿಶೇಷ.

—ಈರಣ್ಣ ಬೆಂಗಾಲಿ, ರಾಯಚೂರು





# ಮರದ ಆಕರ್ಷಕ ಮೇಲ್ಛಾವಣಿ

ಪುರಾತನ ಶಿಲಾದೇಗುಲಗಳಲ್ಲಿ ಸುಂದರ ಕೆತ್ತನೆಯ ಮೇಲ್ಛಾವಣಿಗಳನ್ನು ನಾವು ಕಂಡಿರುತ್ತೇವೆ. ಅಲ್ಲಿನ ವಿನ್ಯಾಸಗಳೆಲ್ಲವೂ ಕಲ್ಲಿನಲ್ಲೇ ಕೆತ್ತಲ್ಪಟ್ಟಿರುತ್ತವೆ. ಆದರೆ ಮರದಿಂದ ಇಂತಹ ಮನಮೋಹಕ ವಿನ್ಯಾಸಗಳನ್ನು ಕೆತ್ತಿ ಮೇಲ್ಛಾವಣಿಯನ್ನಾಗಿ ಬಳಸಿದ್ದನ್ನು ನಾವು ಉಡುಪಿ ಜಿಲ್ಲೆಯ ಕುಂಜಾರುಗಿರಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಪ್ರವೇಶದ್ವಾರದಲ್ಲಿ ಕಾಣಬಹುದು. ದೇವಾಲಯ ಜೀರ್ಣೋದ್ಧಾರದ ಸಂದರ್ಭದಲ್ಲಿ ಸಾಗುವಾನಿ (ತೇಗ) ಮರದಿಂದ ಅಂದವಾಗಿ ಕೆತ್ತಿದ ಬಹುವಿನ್ಯಾಸದ ಹಲವಾರು ಮೇಲ್ಛಾವಣಿಗಳು ಪ್ರವಾಸಿಗರ ಮನಸೆಳೆಯುತ್ತಿವೆ.

—ಧರ್ಮಾನಂದ ಶಿರ್ವ, ಬೆಂಗಳೂರು